13. ನಾರಾಯಣ ಸೋಪ
14. ಬನ್ನಟ್ಟಿ ಕಟ್ಟೆ
15. ಗೋಕುಲ
16. ಗಿರಾಣಿ ಚಾವಲ್
17. ಗುರುಸಿದ್ದೇಶ್ವರ ನಗರ
18. ಇಂದಿರಾ ನಗರ
19. ಕೇಶಾಸುರ
20. ಮಂತೂರ್ ಜೋಪಡಿ
21. ನಾಗರಶೆಟ್ಟಿ ಕೊಪ್ಪಲ್
22. ವಲ್ ವೇಕ್ಕರ್ ಹಕ್ಕಳ್

ಎರಡನೇ ವರ್ಷ 2003-04

ಧಾರವಾಡ

23. ಬಾಲ್ಗಿ ವೃತ
24. ಚೆಪ್ಪರ ಬಾಂಡ್
25. ಗೌಲಿಗಲ್ಲಿ
26. ತಡೆಸಿನ ಕೊಪ್ಪಲ್
27. ಒಡ್ಡರ ಓಣಿ
28. ಯಲ್ಲಾಪುರ್ ನಗರ್ ಕರ್
29. ಕೆಳಗೇರಿ
30. ಮಿಷನ್ ಕಾಂಪೌಂಡ್
31. ಮಂಗಳವಾರ ಪೇಟೆ
32. ಗುಲಗಂಜಿ ಕೊಪ್ಪಲ್
33. ಹೆಬ್ಬಾಳಿ ಅಗಸ್ಸಿ ಸ್ಲಂ

ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಜೂನ್‌ನಲ್ಲಿ ಮರು ಪರೀಕ್ಷೆ

4522 (4807) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 7ನೇ ತರಗತಿಯಿಂದ 11ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಅವರ ಶೈಕ್ಷಣಿಕ ವರ್ಷವನ್ನು ಕಳೆದುಕೊಳ್ಳಬಾರದು ಎಂಬ ಉದ್ದೇಶದಿಂದ ಜೂನ್ ತಿಂಗಳಿನಲ್ಲಿಯೇ ಮರು ಪರೀಕ್ಷೆ ನಡೆಸಿ ಅವರು ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲ ಮಾಡಿಕೊಡಲಾಗಿದೆಯೇ;

ಆ) ಹಾಗಿದ್ದರೆ, ಈ ಅನುಕೂಲವನ್ನು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮಾಡಿಕೊಡದೆ ಇರಲು ಕಾರಣವೇನು;

ಇ) ಇದರಿಂದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಸಾವಿರಾರು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರೆಸಲು ತೊಂದರೆಯಾಗಿರುವುದು ನಿಜವಲ್ಲವೆ;

ಈ) ಹಾಗಿದ್ದರೆ, ಪರೀಕ್ಷೆಯಲ್ಲಿ ಅನುತ್ತೀರ್ಣರಾದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಜೂನ್ ತಿಂಗಳಿನಲ್ಲಿಯೆ ಮರುಪರೀಕ್ಷೆ ನಡೆಸಿ ವಿದ್ಯಾಭ್ಯಾಸ ಮುಂದುವರೆಸಲು ಕ್ರಮ ಕೈಗೊಳ್ಳಲಾಗುವುದೇ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು.

ಆ) ಕೆಳಕಂಡ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದ ಮಾಡಲಾಗುತ್ತಿಲ್ಲ:

1. ದ್ವಿತೀಯ ಪಿಯುಸಿಗೆ ಪಬ್ಲಿಕ್ ಪರೀಕ್ಷೆ ನಡೆಸಲಾಗುತ್ತಿದ್ದು ದ್ವಿತೀಯ ಪಿಯುಸಿ ತರಗತಿಗಳಿಗೆ ವಿದ್ಯಾರ್ಥಿಗಳು ಒಂದು ವರ್ಷ ವಿದ್ಯಾಭ್ಯಾಸ ಮಾಡಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಪರೀಕ್ಷೆಯಲ್ಲಿ ಉತ್ತರಿಸಬೇಕಾಗುತ್ತದೆ. ಪರೀಕ್ಷೆಯಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳು ಪುನಃ ವ್ಯವಸ್ಥಿತವಾಗಿ ನಾಲ್ಕು ತಿಂಗಳ ಅಭ್ಯಾಸ ಮಾಡಿ ಪರೀಕ್ಷೆ ಬರೆಯಬೇಕಾಗುತ್ತದೆ. ಆದುದರಿಂದ ಅಕ್ಟೋಬರ್ ತಿಂಗಳಲ್ಲಿ ಪರೀಕ್ಷೆ ನಡೆಸಿಕೊಂಡು ಬರುತ್ತಿರುವುದು ಸಮರ್ಪಕವಾಗಿದೆ.
2. ಮರುಮೌಲ್ಯಮಾಪನ ಕಾರ್ಯ ನಡೆಸಿ ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ತರಲಾಗಿದೆ. ಈ ಕಾರ್ಯ ನಿರ್ವಹಿಸಲು ಏಪ್ರಿಲ್ ತಿಂಗಳಿನಲ್ಲಿ ನಡೆಸಿದ ಪರೀಕ್ಷೆಯ ಫಲಿತಾಂಶ ಪ್ರಕಟವಾದ ದಿನದಿಂದ ಎರಡು ತಿಂಗಳ (ಜೂನ್ ಮತ್ತು ಜುಲೈ ತಿಂಗಳು) ಕಾಲಾವಕಾಶಬೇಕಾಗುತ್ತದೆ. ಈ ಕಾರ್ಯಕ್ಕೆ ನಿರ್ದೇಶನಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಪ್ರಾಚಾರ್ಯರು, ಉಪನ್ಯಾಸಕ ವರ್ಗದವರ ಸಂಪೂರ್ಣ ಸಹಭಾಗಿತ್ವ ಅವಶ್ಯವಾಗಿರುತ್ತದೆ. ಆದುದರಿಂದ ಇವರುಗಳ ಸಹಭಾಗಿತ್ವವಿಲ್ಲದೆ ಮರು ಪರೀಕ್ಷಾ ಕೆಲಸಗಳನ್ನು ನಡೆಸಲು ಸಾಧ್ಯವಿಲ್ಲ.
3. ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ನಡೆಸಲು ಪರೀಕ್ಷಾ ಕೇಂದ್ರಗಳ ನಿಗದಿ ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳ ನೇಮಕಾತಿ ಉತ್ತರ ಪತ್ರಿಕೆಯ ಮುದ್ರಣ, ಪ್ರಶ್ನೆಪತ್ರಿಕೆ ತಯಾರಿ ಮತ್ತು ಮುದ್ರಣ ವಿದ್ಯಾರ್ಥಿಗಳ ಪ್ರವೇಶ ಪತ್ರ ಮುದ್ರಣ ಮತ್ತು ರವಾನೆ ಮುಂತಾದ ಪ್ರಮುಖ ಕಾರ್ಯಗಳ ಬಗ್ಗೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಕನಿಷ್ಠ ಎರಡು ತಿಂಗಳ (ಆಗಸ್ಟ್ ಮತ್ತು ಸೆಪ್ಟೆಂಬರ್) ಕಾಲಾವಕಾಶ ಬೇಕಾಗುತ್ತದೆ.
4. ವೃತ್ತಿಪರ ಕಾಲೇಜುಗಳಿಗೆ ಸಿ.ಇ.ಟಿ. ಮುಖಾಂತರ ಪ್ರವೇಶಕಾಶವನ್ನು ಪಡೆಯಲು ದ್ವಿತೀಯ ಪಿಯುಸಿ ಫಲಿತಾಂಶವು ಆಧಾರವಾಗಿರುತ್ತದೆ. 2003ರ ಏಪ್ರಿಲ್ ಅಥವಾ ಅದಕ್ಕೂ ಹಿಂದಿನ ಪರೀಕ್ಷೆ ಬರೆದು ಉತ್ತೀರ್ಣರಾದಂತಹ ವಿದ್ಯಾರ್ಥಿಗಳ ಫಲಿತಾಂಶದ ಆಧಾರದ ಮೇಲೆಯೇ ಸಿ.ಇ.ಟಿ. ಫಲಿತಾಂಶವು ಅನುಮೋದಿತವಾಗಿದ್ದು ಸಿ.ಇ.ಟಿ. ಮುಖಾಂತರ ರ್‍ಯಾಂಕ್ ಪ್ರಕಟಿಸಿ

ವೃತ್ತಿಪರ ಕಾಲೇಜುಗಳಿಗೆ ಪ್ರವೇಶಾವಕಾಶವನ್ನು ನೀಡಲಾಗುವುದು. ಆದರೆ ಏಪ್ರಿಲ್ ನಂತರ ನಡೆಸಬಯದಾದ ದ್ವಿತೀಯ ಪಿಯುಸಿ ಮರು ಪರೀಕ್ಷೆಯ ಫಲಿತಾಂಶದ ಮೇಲೆ ಸಿ.ಇ.ಟಿ. ಮೂಲಕ ವೃತ್ತಿಪರ ಕಾಲೇಜಿಗಳಿಗೆ ಪ್ರವೇಶಾಕಾಶ ನೀಡಲಾಗುವುದಿಲ್ಲ. ಆದ್ದರಿಂದ ಮರು ಪರೀಕ್ಷೆಯನ್ನು ಜೂನ್ ನಲ್ಲಿ ನಡೆಸುವ ಉದ್ದೇಶ ಪೂರೈಕೆ ಆಗುವುದಿಲ್ಲ.

5. 7ನೇ ಮತ್ತು ಮೊದಲನೇ ಪಿಯುಸಿ ಪರೀಕ್ಷೆಗಳು ಜಿಲ್ಲಾಮಟ್ಟದ್ದಾಗಿದೆ.

6. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕೇವಲ 6 ವಿಷಯಗಳಿಗೆ ಸೀಮಿತವಾಗಿದ್ದು ಒಂದು ವಾರದೊಳಗಾಗಿ ಪರೀಕ್ಷೆ ನಡೆಸಬಯದಾಗಿದೆ. ಮೇಲಾಗಿ ಈ ಪರೀಕ್ಷಾ ಕೆಲಸವನ್ನು ನಿರ್ವಹಿಸಲು ಪ್ರತ್ಯೇಕ ಪರೀಕ್ಷಾ ಮಂಡಳಿ ಅಸ್ಥಿತ್ವದಲ್ಲಿದ್ದು, ಕಾರ್ಯ ನಿರ್ವಹಿಸುತ್ತದೆ.

7. ದ್ವಿತೀಯ ಪಿ.ಯು.ಸಿ. ಪರೀಕ್ಷೆ 38 ವಿಷಯಗಳಿಗೆ ಸಂಬಂಧಿಸಿದ್ದು ರಾಜ್ಯ ಮಟ್ಟದಲ್ಲಿ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು ಹೆಚ್ಚು ಕಾಲಾವಕಾಶದ ಅವಶ್ಯಕತೆ ಇರುತ್ತದೆ. ಪರೀಕ್ಷೆ ವಿಷಯಗಳಿಗೆ ಪ್ರತ್ಯೇಕ ಮಂಡಳಿ ಇಲ್ಲ.

8. ಮೇಲಾಗಿ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ. 28484/2003 ರಲ್ಲಿ ಎರಡನೇ ಪಿಯುಸಿಗೆ ಶೀಘ್ರ ಪೂರಕ ಪರೀಕ್ಷೆ ನಡೆಸಲೆಂದು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ದಿನಾಂಕ: 19-6-2003 ರಂದು ಸಕಾರಣಗಳಿಗಾಗಿ ವಜಾ ಮಾಡಿರುತ್ತನೆ. ಅದರಿಂದ ದ್ವಿತೀಯ ಪಿ.ಯು.ಸಿ. ಮರು ಪರೀಕ್ಷೆಯನ್ನು ಜೂನ್ ತಿಂಗಳಲ್ಲಿ ನಡೆಸಲು ಸಾಧ್ಯವಿಲ್ಲ.

ಇ) ಇಲ್ಲ.

ಈ) ಆ ಭಾಗಕ್ಕೆ ನೀಡಿರುವ ಉತ್ತರದ ಹಿನ್ನಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿವಿಧ ವಿಶ್ವವಿದ್ಯಾಲಯಗಳ ಪ್ರಸಾರಾಂಗ ಪ್ರಕಟಿಸಿರುವ ಪುಸ್ತಕಗಳು

4524 (4810) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ವಿಶ್ವವಿದ್ಯಾಲಯಗಳ ಪ್ರಸಾರಾಂಗ ಘಟಕಗಳು ಕಳೆದ ಮೂರು ವರ್ಷಗಳಲ್ಲಿ ಪ್ರಕಟಿಸಿದ ಪುಸ್ತಕಗಳು ಯಾವುವು ಹಾಗೂ ಎಷ್ಟು;

ಆ) ಈ ಪ್ರಸಾರಾಂಗ ಘಟಕಗಳಿಗೆ ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚವೆಷ್ಟು? (ವರ್ಷವಾರು ವಿವರ ನೀಡುವುದು);

ಇ) ಪ್ರಕಟಿಸಿದ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರೆ ಬಂದ ಆದಾಯವೆಷ್ಟು

ಈ) ಪ್ರಕಟಿತ ಪುಸ್ತಕಗಳನ್ನು ಬರೆದ ಲೇಖಕರ ಹೆಸರುಗಳನ್ನು ತಿಳಿಸುವುದು?

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಪ್ರಸಾರಾಂಗಗಳು ಕಳೆದ ಮೂರು ವರ್ಷಗಳಲ್ಲಿ ಪ್ರಕಟಿಸಿರುವ ಪುಸ್ತಕಗಳ ವಿವರಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. 483 ಪುಸ್ತಕಗಳನ್ನು ಪ್ರಕಟಿಸಿದೆ.